ಈ ಸಾಂಕ್ರಾಮಿಕ ನಮ್ಮೆಲ್ಲರನ್ನು ಬೆದರಿಸುತ್ತಿದೆ. ಇದನ್ನು ನಿಯಂತ್ರಿಸದಿದ್ದರೆ, ಲಕ್ಷಾಂತರ ಜನರನ್ನು ಸಾವಿಗೆ ದೂಡಬಹುದು  ಅಲ್ಲದೆ ಕೋಟ್ಯಾಂತರ ಮಂದಿಯನ್ನು ಬಡತನದ ಕೂಪಕ್ಕೆ ತಳ್ಳಬಹುದು. ಈ ಪರಿಸ್ಥಿತಿಯು ಉಂಟಾಗದಂತೆ ತಡೆಯಲು ಕೇವಲ ಲಸಿಕೆಯಿಂದ ಮಾತ್ರವೇ ಸಾಧ್ಯ, ಆದರೆ ಪ್ರಸ್ತುತ ಭಾರತದಲ್ಲಿ ಕೇವಲ 2% ರಷ್ಟು ಜನರು ಮಾತ್ರ ಸಂಪೂರ್ಣ ಲಸಿಕೆ ಪಡೆದಿರುತ್ತಾರೆ.

ಸರಿಯಾಗಿ ಹಾಗೂ ಎಲ್ಲರಿಗೂ ಸುರಕ್ಷಿತವಾಗಿ ಲಸಿಕೆ ಪಡೆಯುವ ಅವಕಾಶವನ್ನು ಸರ್ಕಾರದ ಮೇಲೆ ಒತ್ತಡ ಹೇರಿ ದೊರಕಿಸಿಕೊಡಬಲ್ಲ ಸಾಮರ್ಥ್ಯ ಹಾಗೂ ಈ ಪರಿಸ್ಥಿತಿಯನ್ನು ಬದಲಿಸಬಲ್ಲ ಸಾಮರ್ಥ್ಯ ಜನರ ಮುಂದಾಳತ್ವದ ಅಭಿಯಾನಗಳಿಗಿದೆ. ಇದರಿಂದಾಗಿ ಭಾರತದಲ್ಲಿ ಜೀವಗಳನ್ನು ಉಳಿಸಲು ಹಾಗೂ ಪರಿಸ್ಥಿತಿಯನ್ನು ಮತ್ತೆ ಸಹಜ ಸ್ಥಿತಿಗೆ ತರಲು ಸಾಧ್ಯವಾಗುತ್ತದೆ. ನೆನೆಯಷ್ಟೆ ಅಮೇರಿಕಾ, ನ್ಯೂಝಿಲೆಂಡ್ ಹಾಗೂ ಫ್ರಾನ್ಸ್ ದೇಶಗಳು ಪೌರ ಸಮಾಜದ ಜಾಗತಿಕ ಅಭಿಯಾನಗಳಿಗೆ ಮಣಿದು  ಟ್ರಿಪ್ಸ್   (TRIPS) ಮನ್ನಾ ಮಾಡಲು ಬೆಂಬಲ ಸೂಚಿಸಿವೆ.

ಭಾರತ ಈಗ ಕಾರ್ಯತತ್ಪರವಾಗಬೇಕಿದೆ. ನಿರ್ದಿಷ್ಟ ಹಾಗೂ ಕಾಲಮಿತಿಗೆ ಒಳಗೊಂಡಂತೆ, ಈ ಕೆಳಗಿನ ಅಂಶಗಳನ್ನು ಸೇರಿಸಿ,  ಪ್ರಧಾನ ಮಂತ್ರಿಗಳಿಗೆ ಬರೆಯುತ್ತಿರುವ ಅರ್ಜಿಗೆ ನಿಮ್ಮೆಲ್ಲರ ಬೆಂಬಲವನ್ನು ಕೋರುತ್ತಿದ್ದೇವೆ.

- ಎಲ್ಲರಿಗೂ ಲಸಿಕೆಯನ್ನು ಉಚಿತವಾಗಿ ನೀಡಬೇಕು .
- ಇದರ ಹಂಚಿಕೆ ಎಲ್ಲರಿಗೂ ಸಮಾನವಾಗಿ ದೊರೆಯುವಂತಿರಬೇಕು ಹಾಗೂ ಅಪಾಯದಂಚಿನ ಗುಂಪುಗಳನ್ನು ಅವರ ಸ್ಥಳದಲ್ಲಿಯೇ ದೊರೆಯುವಂತೆ ಮಾಡಬೇಕು.  ಕೇಂದ್ರ ಸರ್ಕಾರದ ನಿಯಂತ್ರಿತ ಬೆಲೆಯಲ್ಲಿ ಕೇಂದ್ರೀಕೃತ ಸಂಗ್ರಹಣಾ ವ್ಯವಸ್ಥೆಯ ಮೂಲಕ ದೊರೆಯಬೇಕು.
- ಕಡ್ಡಾಯ ಪರವಾನಗಿ ಹೊಂದಿರುವ ಹಾಗೂ ಯಾವುದೇ ಬೌದ್ಧಿಕ ಸ್ವತ್ತು ಹಕ್ಕಿನ ಹಿಡಿತವಿಲ್ಲದ ಲಸಿಕೆ ನೀಡಲು ಸರ್ಕಾರ ಬದ್ಧವಾಗಿರಬೇಕು ಹಾಗು ಇದಕ್ಕೆ ಬೇಕಾದ  ಅಥವಾ ಇನ್ನಾವುದೇ ಆರೋಗ್ಯ ಅಗತ್ಯಗಳಿಗೆ ಹಣಕಾಸು ಒದಗಿಸಲು ಸರ್ಕಾರ ಸಿದ್ಧವಿರಬೇಕು.

ಈ ಅರ್ಜಿಯನ್ನು ಬೆಂಬಲಿಸಲು ಕೆಳಗೆ ನೀಡಿರುವ ಗೂಗಲ್ ಫಾರ್ಮ್ ಅನ್ನು  ಮೇ            ಸೋಮವಾರ ರಾತ್ರಿ 9.00 ಘಂಟೆಯೊಳಗೆ ತುಂಬಿಸಿರಿ. ಜನರ ಲಸಿಕೆಯ ಕುರಿತು ಇನ್ನಷ್ಟು ವಿವರಗಳು ಇದರಲ್ಲಿದೆ. ಇದರಲ್ಲಿರುವ ವಿಷಯಗಳನ್ನು ಒಪ್ಪುವ ಹಾಗೂ ಬೆಂಬಲಿಸುವ ಇತರರೊಂದಿಗೂ ಸಹ ಇದನ್ನು ಹಂಚಿಕೊಳ್ಳಬಹುದು.

ಈ ಕೆಳಗಿನ ಫಾರ್ಮ್ ತುಂಬಿಸಲು ನಾನು ನಿಮ್ಮನ್ನು ಆಹ್ವಾನಿಸುತ್ತಿದ್ದೇನೆ.

## ಭಾರತದಲ್ಲಿ ಜನರ ಲಸಿಕೆ : ಪ್ರಧಾನಿಯವರಿಗೆ ಬರೆದ ಸಾಮೂಹಿಕ ಪತ್ರಕ್ಕೆ ಬೆಂಬಲ

ಈ ಸಾಂಕ್ರಾಮಿಕ ನಮ್ಮೆಲ್ಲರನ್ನು ಬೆದರಿಸುತ್ತಿದೆ. ಇದನ್ನು ನಿಯಂತ್ರಿಸದಿದ್ದರೆ, ಲಕ್ಷಾಂತರ ಜನರನ್ನು ಸಾವಿಗೆ ದೂಡಬಹುದು  ಅಲ್ಲದೆ ಕೋಟ್ಯಾಂತರ ಮಂದಿಯನ್ನು ಬಡತನದ ಕೂಪಕ್ಕೆ ತಳ್ಳಬಹುದು. ಲಸಿಕೆಗೆ ಎಲ್ಲರಿಗೂ ನೈತಿಕ ಹಾಗೂ ಸುರಕ್ಷಿತ ಅವಕಾಶ  ದೊರೆಯುವಂತೆ ಮಾಡಿದರೆ ಆರೋಗ್ಯ ವ್ಯವಸ್ಥೆಯ ಮೇಲಿನ ತಗ್ಗಿಸಬಹುದು ಹಾಗೂ ಭಾರತ ಬಹಳ ಬೇಗ ಸಹಜ ಸ್ಥಿತಿಗೆ ಮರಳುವಂತೆ ಮಾಡಬಹುದು. ಆದ್ದರಿಂದ ಭಾರತ ಕೂಡಲೇ ಲಸಿಕೆ ಹೆಚ್ಚೆಚ್ಚು ಜನರಿಗೆ ಅದರಲ್ಲಿಯೂ ಅಪಾಯದಂಚಿನ ಜನರಿಗೆ ಆದಷ್ಟು ಶೀಘ್ರವಾಗಿ ದೊರಯುವಂತೆ ಮಾಡಬೇಕಿದೆ.

ಕೇಂದ್ರ ಸರ್ಕಾರವು ಹೆಚ್ಚು ಕ್ರಿಯಾಶೀಲ ನಾಯಕತ್ವ ವಹಿಸಬೇಕಿದೆ. ಇದು ಕೇವಲ ನೈತಿಕ ಜವಾಬ್ದಾರಿ ಮಾತ್ರವಲ್ಲ ಬದಲಿಗೆ ಇದು ಬಹು ಮುಖ್ಯವಾಗಲು ಮತ್ತೊಂದು ಪ್ರಮುಖ ಕಾರಣವೆಂದರೆ, ವೈರಾಣು ರೂಪಾಂತರ ಹೊಂದುವಂತಹದ್ದಾಗಿದ್ದು , ಶೀಘ್ರವಾಗಿ ಕಾರ್ಯೋನ್ಮುಖವಾಗದಿದ್ದರೆ ಒಂದು ವರ್ಷದೊಳಗೆ ವೈರಾಣು ರೂಪಾಂತರ ಹೊಂದಿ, ಲಸಿಕೆ ಅನುಪಯುಕ್ತವಾಗುವಂತೆ ಮಾಡಿಬಿಡುವ ಅಪಾಯವಿದೆ. ಮೊದಲೆ ಬಡತನದಲ್ಲಿ ಬದುಕುತ್ತಿರುವ ಭಾರತ ಜನರು ತಮ್ಮ ಮಾಸಿಕ ವೇತನದಲ್ಲಿ 43%ರಷ್ಟು ಬೆಲೆಯಾಗುವ ಲಸಿಕೆಯನ್ನು ಕೊಂಡು ತೆಗೆದುಕೊಳ್ಳುವ ಪರಿಸ್ಥಿತಯಲ್ಲಿಲ್ಲ. ಲಸಿಕೆಯ ತಯಾರಕರು , ಈ ಪರಿಸ್ಥಿತಿಯಲ್ಲಿ ಅದರಲ್ಲಿಯೂ ಯಾವುದೇ ಲಾಭವಿಲ್ಲದೆ ಪ್ರತಿಯೊಬ್ಬರಿಗೂ ಸಮಾನ ಅವಕಾಶ ದೊರಕಿಸಿಕೊಡುವ ಭಾರತೀಯ ಸೇರಮ್ ಸಂಸ್ಥೆಯು ಲಾಭ ಮಾಡುವ ಪ್ರಯತ್ನ ಮಾಡಬಾರದು.

ಇದರಂತೆ ನಾವು ಸರ್ಕಾರ ಪ್ರತಿಯೊಬ್ಬರಿಗೂ ಜನರ ಲಸಿಕೆ ಒದಗಿಸಬೇಕೆಮದು ಕರೆ ನೀಡುತ್ತೇವೆ. ಇದರಲ್ಲಿ ಬಹಳ ವಿವರವಾದ, ಪಾರದರ್ಶಕವಾದ ಹಾಗೂ ಕಾಲಮಿತಿಯುಳ್ಳ ಲಸಿಕಾ ನೀತಿ ಹಾಗೂ ಎಲ್ಲ ರಾಜ್ಯಗಳ ಸಮಾಲೋಚನೆ ಮಾಡಿ ಹಾಗೂ ತಜ್ಞರ ಅಭಿಪ್ರಾಯಗಳನ್ನು ಹೊಂದಿದ ಮತ್ತು ಔಷಧ ಕಂಪೆನಿಗಳೊಂದಿಗೆ ಒಪ್ಪಂದ ಹೊಂದಿರುವ ಬಗ್ಗೆ ವಿವರಗಳು ಲಭ್ಯವಿರಬೇಕು.

1. ಲಸಿಕೆಯನ್ನು ನಿಜ (ಮುಖಬೆಲೆ) ಬೆಲೆಗೆ ಖರೀದಿಸಬೇಕು ಹಾಗೂ ಪ್ರತಿಯೊಬ್ಬ ಪ್ರಜೆ ಉಚಿತವಾಗಿ ದೊರೆಯುವಂತೆ ಮಾಡಬೇಕು.

2. ಅಪಾಯದಂಚಿನ ಗುಂಪುಗಳಿಗೆ ಮೊದಲ ಆದ್ಯತೆ ನೀಡಬೇಕು, ತಾಂತ್ರಿಕ ಜ್ಞಾನದ ಅರಿವಿಲ್ಲದ ಜನರಿಗೂ ಹಾಗೂ ಪ್ರದೇಶಗಳಿಗೂ ಸಹ ಸೂಕ್ತವಾಗುವಂತೆ ಒದಗಿಸಬೇಕು.
3. ರಾಜ್ಯದ ಹಣಕಾಸು ಪರಿಸ್ಥಿತಿ ಹದಗೆಡದಂತೆ ಅಥವಾ ಒಂದು ರಾಜ್ಯ ಮತ್ತೊಂದು ರಾಜ್ಯದ ಮೇಲೆ ಸ್ಪರ್ಧೆ ಮಾಡದಂತೆ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಇವೆಲ್ಲವನ್ನು ಕೇಂದ್ರ ಸರ್ಕಾರವೇ ಮಾಡಬೇಕು.
4. ಕೋವಿಡ್ ನ ಮುಂದಿನ ಅಲೆಯ ಸಮಸ್ಯೆಯನ್ನು ತಡೆಗಟ್ಟಲು ಅನುವಾಗುವಂತೆ ಕಡ್ಡಾಯ ಪರವಾನಗಿ, ಸಾರ್ವಜನಿಕ ಲಸಿಕೆ ಉತ್ಪಾದನೆ ಹೆಚ್ಚಿಸುವ ಪ್ರಯತ್ನವೂ ಸೇರಿದಂತೆ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗೆ ಸಾಕಷ್ಟು ಅನುದಾನ ಇರುವಂತೆ ಆರೋಗ್ಯ ಆಯವ್ಯಯ ಹೆಚ್ಚಿಸಬೇಕು ಹಾಗೂ ಪ್ರಸ್ತುತ ಇರುವ ಆರೋಗ್ಯ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕು.

ಲಸಿಕೆಯನ್ನು ಕುರಿತ ಭಾರತದ ಪ್ರತಿಪಾದನೆಯನ್ನು ನಾವು ಈ ಕೆಳಗಿನ ಅಂಶಗಳ ಆಧಾರದಲ್ಲಿ ಬೆಂಬಲಿಸುತ್ತೇವೆ.

1.ವಿಶ್ವ ವ್ಯಾಪಾರ ಸಂಸ್ಥೆಯ ಟ್ರಿಪ್ಸ್ ಒಪ್ಪಂದದಲ್ಲಿನ  ಬೌದ್ಧಿಕ ಸ್ವತ್ತು ಹಕ್ಕಿನ ಮೇಲೆ, ಪೇಟೆಂಟ್ ಮುಂತಾದವುಗಳ ಮೇಲೆ ತಾತ್ಕಾಲಿಕ ಸಡಲಿಕೆ ಮಾಡಿ ಸರ್ವರಿಗೂ ಉಚಿತ ಲಸಿಕೆ ದೊರೆಯುವಂತೆ ಮಾಡುವುದು.
2. ಶ್ರೀಮಂತ ರಾಷ್ಟ್ರಗಳು ಲಸಿಕೆಯನ್ನು ತಮ್ಮ ದೇಶವನ್ನು ಮಾತ್ರ ಕಾಪಾಡಿಕೊಳ್ಳಲು ಇಟ್ಟುಕೊಳ್ಳದಂತೆ ಹಾಗೂ ಲಸಿಕೆ ತಯಾರಿಕೆಗೆ ಬೇಕಾದ ವಸ್ತುಗಳ ರಫ್ತಿನ ಮೇಲಿನ ನಿಷೇಧವಿರದಂತೆ ಮಾಡಬೇಕು, ಮತ್ತು
3. ಹೆಚ್ಚಿಗೆ ಲಭ್ಯವಿರುವ  ಲಸಿಕೆಯನ್ನು ಜಾಗತಿಕ ಉತ್ತರಕ್ಕೆ ಮಾತ್ರವಲ್ಲದೆ ಬೇರೆಯವರಿಗೂ ಅನುವಾಗುವಂತೆ ಪುನರ್ಹಂಚಿಕೆ ಮಾಡಬೇಕು.

ಈ ಕುರಿತು ಹೆಚ್ಚಿನ ಪ್ರಶ್ನೆಗಳಿದ್ದರೆ ಕಿರು ನೀತಿ ಹೊತ್ತಿಗೆಯಲ್ಲಿ ಉತ್ತರಗಳು ದೊರೆಯುತ್ತವೆ. ಇದನ್ನು ಈ http://bit.ly/VaccineforAll ಅಂತರ್ಜಾಲದಲ್ಲಿ ಪಡೆದುಕೊಳ್ಳಬಹುದು.

ಈ ಅರ್ಜಿಗೆ ಬೆಂಬಲಿಸಲು ಕೆಳಗೆ ನೀಡಿರುವ ಅರ್ಜಿಯನ್ನು ತುಂಬಿಸಿರಿ.